KASM620013382025

Presented on : 04-07-2025
Registered on : 04-07-2025
Decided on : 13-07-2026
Duration : 1 years, 0 months, 9 days

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ.

: **ಉಪಸ್ಥಿತರು**:

ಶ್ರೀ **ಮಾದೇಶ ಎಂ.ವಿ.,** ಬಿ.ಕಾಂ., ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಾಗರ.

ದಿನಾಂಕಃ 13 ನೇ ಜುಲೈ 2026

ಸಿ.ಸಿ. ಸಂಖ್ಯೆ 872/2025

ಪಿರ್ಯಾದಿದಾರರುಃ

ಶ್ರೀ ಜೋಸೆಫ್ ಲೋಬೋ ಬಿನ್ ಜಾನ್ ಲೋಬೋ,
ವಯಸ್ಸು ಸುಮಾರು 67 ವರ್ಷ,
ವಾಸಃ ನೆಹರೂ ನಗರ, ಸಾಗರ ನಗರ,
ಶಿವಮೊಗ್ಗ ಜಿಲ್ಲೆ.

(ಶ್ರೀ ಕೆ.ಎಂ.ಎನ್.,–ವಕೀಲರು)

ವಿರುದ್ಧ

ಆರೋಪಿತ: ಶ್ರೀ ಜಯಂತ ಎಂ. ಬಿನ್ ಮಂಜಪ್ಪ,
ವಯಸ್ಸು ಸುಮಾರು 35 ವರ್ಷ,

ಗ್ರಾಮ ಪಂಚಾಯ್ತಿ ಬಿಲ್ ಕಲೆಕ್ಟರ್,
ವಾಸಃ ಕೆಳದಿಪುರ, ಎಸ್.ಸಿ. ಕಾಲೋನಿ,
ಬೇಳೂರು ಅಂಚೆ, ಸಾಗರ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ.

(ಶ್ರೀ ಕೆ.ಹೆಚ್.ಆರ್.,ವಕೀಲರು)

ತೀರ್ಪು

ಆರೋಪಿಯು ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ ಕಲಂ 138 ರಡಿಯಲ್ಲಿ ಅಪರಾಧವೆಸಗಿದ್ದಾರೆಂದು, ಪ್ರಸ್ತುತ ಖಾಸಗಿ ದೂರನ್ನು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆಯ 2023 ರ ಕಲಂ 223(1) ರಡಿಯಲ್ಲಿ ಸಲ್ಲಿಸಲಾಗಿದೆ.

2. ದೂರಿನ ಸಾರಾಂಶವೇನೆಂದರೆ, ಆರೋಪಿ ಮತ್ತು ಪಿರ್ಯಾದುದಾರರು ಪರಿಚಯಸ್ಥರಾಗಿರುತ್ತಾರೆ. ಆರೋಪಿ, ಪಿರ್ಯಾದುದಾರರಿಂದ ತನ್ನ ತಂದೆಯ ಆರೋಗ್ಯದ ಸಲುವಾಗಿ ದಿನಾಂಕಃ 12.06.2024 ರಂದು ರೂ. 95,000/- ಗಳನ್ನು ಕೇಳಿದ್ದು, ಅದರಂತೆ ದಿನಾಂಕಃ 13.06.2024 ರಂದು ಪಿರ್ಯಾದುದಾರರು ಆರೋಪಿಗೆ 95,000/- ರೂ.ಗಳ ಕೈಗಡ ಸಾಲವನ್ನು ನೀಡಿರುತ್ತಾರೆ. ಜೊತೆಗೆ ಆರೋಪಿಯು ಪಿರ್ಯಾದುದಾರರ ಮನೆಯ ಬಾಡಿಗೆ ಬಾಬ್ತು ಮಾಸಿಕ ರೂ. 5,000/- ರೂಗಳಂತೆ 11 ತಿಂಗಳ ಬಾಡಿಗೆ ಹಣವಾದ

55,000/- ರೂ.ಗಳನ್ನು ಪಾವತಿಸಿರುವುದಿಲ್ಲ. ಸದರಿ ಕೈಗಡ ಸಾಲವನ್ನು ಎರಡು ತಿಂಗಳೊಳಗಾಗಿ ಮರುಪಾವತಿ ಮಾಡುವುದಾಗಿ ಹೇಳಿರುತ್ತಾರೆ. ಸದರಿ ಅವಧಿಯು ಮುಗಿದ ನಂತರ, ಪಿರ್ಯಾದಿಯು ಆರೋಪಿತನನ್ನು ತಾನು ಸಾಲವಾಗಿ ನೀಡಿದ್ದ 95,000/- ಹಾಗೂ ಬಾಕಿ ಬಾಡಿಗೆ ಹಣ ರೂ. 55,000/- ಗಳನ್ನು ಮರುಪಾವತಿ ಮಾಡುವಂತೆ ಕೋರಿದಾಗ, ಆರೋಪಿಯು ದಿನಾಂಕಃ 13-09-2024 ಎಂದು ಮುಂದಿನ ದಿನಾಂಕವನ್ನು ನಮೂದಿಸಿದ ಐ.ಸಿ.ಐ.ಸಿ.ಐ. ಬ್ಯಾಂಕ್, ಮಾರ್ಕೇಟ್ ರಸ್ತೆ, ಸಾಗರ ಶಾಖೆಯ ತನ್ನ ಖಾತೆಗೆ ಸಂಬಂಧಪಟ್ಟ ಚೆಕ್ ನಂಬರ್ 000513 ಅನ್ನು ರೂ. 1,50,000/- ರೂ.ಗಳಿಗೆ ಆರೋಪಿತನು ಪಿರ್ಯಾದಿ ಪರವಾಗಿ ನೀಡಿರುತ್ತಾನೆ. ಸದರಿ ಚೆಕ್ಕನ್ನು ಪಿರ್ಯಾದುದಾರನು ತನ್ನ ಖಾತೆ ಹೊಂದಿರುವ ಎಸ್.ಬಿ.ಐ. ಬ್ಯಾಂಕ್, ವರದಾ ರಸ್ತೆ, ಸಾಗರ ಶಾಖೆಗೆ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ, ರೆಫರ್ ಟು ಡ್ರಾಯರ್ ಎಂಬ ಹಿಂಬರಹದೊಂದಿಗೆ, ದಿನಾಂಕಃ 16-09-2024 ರಂದು ಅನಾಧರಣಗೊಳಿಸಿ, ಹಿಂಬರಹವನ್ನು ನೀಡಿರುತ್ತಾರೆ. ಆರೋಪಿತನಿಗೆ ಪಿರ್ಯಾದಿಯು ತಮ್ಮ ವಕೀಲರ ಮೂಲಕ ದಿನಾಂಕಃ 25-09-2024 ರಂದು ನೋಟೀಸನ್ನು ನೀಡಿದ್ದು, ಸದರಿ ನೋಟೀಸು ದಿನಾಂಕಃ 09-10-2024 ರಂದು ಖುದ್ದು ಜಾರಿಯಾಗಿರುತ್ತದೆ. ನಂತರ, ಆರೋಪಿತನು ಸದರಿ ನೋಟೀಸಿಗೆ ಉತ್ತರವನ್ನು ನೀಡಿಲ್ಲ ಚೆಕ್ಕಿನ ಹಣವನ್ನು ಮರುಪಾವತಿ

ಮಾಡಿರುವುದಿಲ್ಲ. ಆದ್ದರಿಂದ, ಆರೋಪಿತನ ವಿರುದ್ಧ ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ ಕಲಂ.138 ರ ಅಪರಾಧಕ್ಕಾಗಿ ಕ್ರಮ ತೆಗೆದುಕೊಳ್ಳುವಂತೆ, ಪ್ರಸ್ತುತ ದೂರನ್ನು ಸಲ್ಲಿಸಿರುತ್ತಾರೆ.

3. ನ್ಯಾಯಾಲಯವು ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ ಅಡಿಯಲ್ಲಿ ಆರೋಪಿಯ ವಿರುದ್ಧ ಆರೋಪಿಸಿರುವ ಅಪರಾಧಕ್ಕೆ ಸಂಜ್ಞಾನವನ್ನು ತೆಗೆದುಕೊಂಡ ನಂತರ, ಆರೋಪಿಗೆ ಸಮನ್ಸನ್ನು ನೀಡಿರುತ್ತದೆ. ನಂತರ, ಆರೋಪಿಯು ತನ್ನ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ, ಜಾಮೀನನ್ನು ಪಡೆದುಕೊಂಡಿರುತ್ತಾರೆ. ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ ಕಲಂ. 138 ರ ಅಡಿಯಲ್ಲಿ ಆರೋಪಿಸಿರುವ ಅಪರಾಧಕ್ಕಾಗಿ ಆರೋಪಿಗೆ ತಪ್ಪಿನ ವಾದವನ್ನು ಕನ್ನಡದಲ್ಲಿ ಓದಿ ಹೇಳಲಾಯಿತು. ಆರೋಪಿಯು ಸದರಿ ತಪ್ಪಿನ ವಾದವನ್ನು ನಿರಾಕರಿಸಿ, ವಿಚಾರಣೆ ಆಗಲಿ ಎಂದು ಕೇಳಿಕೊಂಡ ಮೇರೆಗೆ ಪ್ರಕರಣವನ್ನು ವಿಚಾರಣೆಗೆ ಮುಂದೂಡಲಾಯಿತು.

4. ಪಿರ್ಯಾಧಿಯು ತನ್ನ ದೂರಿನಲ್ಲಿ ಹೇಳಿರುವ ಸಂಗತಿಗಳನ್ನು ನಿರೂಪಿಸುವ ಸಲುವಾಗಿ, ತನ್ನನ್ನು ತಾನು ಪಿ.ಡಬ್ಲ್ಯೂ-1 ಎಂದು ವಿಚಾರಣೆಗೆ ಗುರಿಪಡಿಸಿಕೊಂಡು, ತಮ್ಮ ಮುಖ್ಯ ವಿಚಾರಣೆಯ ಸಲುವಾಗಿ ಶಪಥ ಪತ್ರವನ್ನು ಸಲ್ಲಿಸಿ, ಸದರಿ ಶಪಥ ಪತ್ರದಲ್ಲಿ, ದೂರಿನಲ್ಲಿ ಹೇಳಿರುವ ಸಂಗತಿಗಳನ್ನು

ಪುನರುಚ್ಚರಿಸಿರುತ್ತಾರೆ. ಪಿ.ಡಬ್ಲ್ಯೂ.1 ರವರು ತಮ್ಮ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ, ನಿ.ಪಿ.1 ರಿಂದ ನಿ.ಪಿ.5 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಪಿರ್ಯಾದುದಾರರ ಪರ ಸಾಕ್ಷ್ಯ ವಿಚಾರಣೆ ಮುಗಿದ ನಂತರ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆಯ ಕಲಂ 351 ರ ಅಡಿಯಲ್ಲಿ ಆರೋಪಿತನ ಹೇಳಿಕೆಯನ್ನು ಅಭಿಲೇಖಿಸಲಾಯಿತು. ಸದರಿ ಹೇಳಿಕೆಯಲ್ಲಿ ಅಭಿಲೇಖಿಸಲಾದ ಹೇಳಿಕೆಯನ್ನು ಅಲ್ಲಗಳೆದು ಆರೋಪಿತನು ತಾನು ನಿರಾಪರಾಧಿ ಎಂದು ನಿರೂಪಿಸುವ ಸಲುವಾಗಿ ತನ್ನನ್ನು ತಾನು ಡಿ.ಡಬ್ಲ್ಯೂ-1 ಎಂದು ವಿಚಾರಣೆಗೆ ಗುರಿಪಡಿಸಿಕೊಂಡು, ತಮ್ಮ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ಡಿ.ಡಬ್ಲ್ಯೂ-1 ರವರು ತಮ್ಮ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ, 01 ದಾಖಲೆಯನ್ನು ನಿ.ಡಿ.1 ಎಂದು ನಿಶಾನೆಯನ್ನಾಗಿ ಗುರುತಿಸಿಕೊಂಡಿರುತ್ತಾರೆ.

5. ಉಭಯ ಪಕ್ಷಗಾರರ ವಾದಗಳನ್ನು ಆಲಿಸಲಾಯಿತು ಮತ್ತು ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಲಾಯಿತು. ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

ಅಂಶಗಳು

1. ಆರೋಪಿಯು ಫಿರ್ಯಾದಿಗೆ ಕಾನೂನಾತ್ಮಕವಾಗಿ ಪಾವತಿಸಬೇಕಾದ ಹಣಕ್ಕಾಗಿ, ಐ.ಸಿ.ಐ.ಸಿ.ಐ. ಬ್ಯಾಂಕ್, ಸಾಗರ

ಶಾಖೆ ಇದರ ತನ್ನ ಖಾತೆಗೆ ಸಂಬಂಧಪಟ್ಟ ಚೆಕ್ ನಂಬರ್ 000513 ಅನ್ನು 1,50,000/-ರೂ. ಎಂದು ನಮೂದಿಸಿ, ಫಿರ್ಯಾದಿಯ ಪರವಾಗಿ ನೀಡಿರುತ್ತಾನೆಯೇ?

2. ಸದರಿ ಚೆಕ್ಕನ್ನು ಫಿರ್ಯಾದಿಯು ತನ್ನ ಖಾತೆ ಹೊಂದಿರುವ ಎಸ್.ಬಿ.ಐ. ಬ್ಯಾಂಕ್, ಸಾಗರ ಶಾಖೆಗೆ ನಗದೀಕರಿಸಿಕೊಳ್ಳಲು ಹಾಜರುಪಡಿಸಿದಾಗ, ಸದರಿ ಚೆಕ್ಕು *"Refer to Drawer"* ಎಂಬ ಕಾರಣಕ್ಕಾಗಿ ಅನಾಧರಿತವಾಗಿದೆಯೇ?

3. ಫಿರ್ಯಾದಿಯ ನಿಗಧಿತ ಕಾಲಾವಧಿಯಲ್ಲಿ ಆರೋಪಿಗೆ ನೋಟೀಸನ್ನು ನೀಡಿ, ಚೆಕ್ಕಿನಲ್ಲಿರುವ ಹಣವನ್ನು ಪಾವತಿಸುವಂತೆ ಕೇಳಿಕೊಂಡಿದ್ದಾರೆಯೇ?

4. ಸದರಿ ನೋಟೀಸು ಅನ್ನು ಆರೋಪಿಗೆ ನೀಡಿದ ನಂತರವೂ ಸಹ, ಆರೋಪಿತನು ಚೆಕ್ಕಿನ ಹಣವನ್ನು ನಿಗದಿತ ಅವಧಿಯಲ್ಲಿ ಪಾವತಿಸದೆ ಇರುವ ಕಾರಣ, ಆರೋಪಿಯು ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದಾರೆಯೇ?

5. ಯಾವ ಆದೇಶ?

6. ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರವು ಈ ಕೆಳಕಂಡಂತೆ ಇರುತ್ತದೆ.

ಅಂಶ. 1 : ***ಸಕಾರಾತ್ಮಕವಾಗಿ***

ಅಂಶ. 2 : ***ಸಕಾರಾತ್ಮಕವಾಗಿ***

ಅಂಶ. 3 : ***ಸಕಾರಾತ್ಮಕವಾಗಿ***

ಅಂಶ. 4 : ***ಸಕಾರಾತ್ಮಕವಾಗಿ***

ಅಂಶ.5 : **ಈ ಕೆಳಕಂಡ ಕಾರಣಗಳಿಂದಾಗಿ ಅಂತಿಮ ಆದೇಶದಂತೆ –**

ಕಾ ರ ಣ ಗ ಳು

7. **ಅಂಶ–1 ರಿಂದ 4:–** ಈ ನಾಲ್ಕು ಅಂಶಗಳ ಮೇಲಿನ ಚರ್ಚೆಯು ಒಂದರ ಮೇಲೆ ಇನ್ನೊಂದು ಅವಲಂಬಿತವಾಗಿರುವುದರಿಂದ ಮತ್ತು ಪ್ರಕರಣದ ವಸ್ತುಸ್ಥಿತಿಗಳ ಮತ್ತು ವಾಕ್ಯಗಳ ಪುನರಾವರ್ತನೆಯನ್ನು ತಪ್ಪಿಸುವುದಕ್ಕಾಗಿ, ಈ ಎಲ್ಲಾ ಅಂಶಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

8. ಪಿರ್ಯಾದಿ ಮತ್ತು ಆರೋಪಿತನು ಪರಿಚಯಸ್ಥರಾಗಿದ್ದರಿಂದ, ದಿನಾಂಕಃ 12.06.2024 ರಂದು ತನ್ನ ತಂದೆಯ ಆರೋಗ್ಯದ ಸಲುವಾಗಿ 95,000/– ರೂ. ಗಳನ್ನು ಆರೋಪಿತನು ಪಿರ್ಯಾದಿಯಿಂದ ಕೈಗಡ ಸಾಲವಾಗಿ ಪಡೆದುಕೊಂಡಿರುತ್ತಾರೆ. ಆರೋಪಿತನು ಪಿರ್ಯಾದಿಯ ಮನೆಯಲ್ಲಿ ಮಾಸಿಕ 5,000/–ರೂ.ಗಳಂತೆ ಬಾಡಿಗೆಗೆ ವಾಸವಾಗಿದ್ದು, 11 ತಿಂಗಳ ಬಾಡಿಗೆಯಾದ 55,000/–ರೂ.ಗಳನ್ನು ಬಾಕಿ ಇರಿಸಿಕೊಂಡಿದ್ದನು. ನಿಗದಿತಿ ಕಾಲಾವಧಿಯ ನಂತರ ತನ್ನಿಂದ ಪಡೆದ 95,000/– ರೂ.ಗಳ ಸಾಲದ ಹಣ ಮತ್ತು ಬಾಕಿ ಉಳಿಸಿಕೊಂಡಿದ್ದ 55,000/– ರೂ. ಗಳನ್ನು ಪಾವತಿಸುವಂತೆ ಆರೋಪಿಯನ್ನು ಪಿರ್ಯಾದಿಯು ಕೇಳಿರುತ್ತಾರೆ. ಆಗ ಸದರಿ ಸಾಲದ ಹಣವನ್ನು ಮರುಪಾವತಿ ಮಾಡುವ ಸಲುವಾಗಿ ದಿನಾಂಕಃ 13.09.2024 ರಂದು ಆರೋಪಿತನು ನಿ.ಪಿ.1 ರ ಚೆಕ್ಕನ್ನು 1,50,000/ ರೂ.ಗಳಿಗೆ ಪಿರ್ಯಾದಿಯ ಪರವಾಗಿ ನೀಡಿರುತ್ತಾರೆ. ಸದರಿ ಚೆಕ್ಕನ್ನು ಪಿರ್ಯಾದಿಯು ಎಸ್.ಬಿ.ಐ. ಸಾಗರ ಶಾಖೆಯಲ್ಲಿರುವ ತನ್ನ ಖಾತೆಗೆ ನಗಧಿಕರಣಕ್ಕಾಗಿ ಹಾಜರುಪಡಿಸಿದಾಗ, ಸದರಿ ಚೆಕ್ಕು

ನಗದೀಕರಣಗೊಳ್ಳದೇ ದಿನಾಂಕಃ 16.09.2024 ರಂದು ಅನಾದರಣಗೊಂಡಿರುತ್ತದೆ. ತದನಂತರ, ದಿನಾಂಕಃ 25.09.2024 ರಂದು ಆರೋಪಿತನಿಗೆ ಪಿರ್ಯಾದಿಯು ತನ್ನ ವಕೀಲರ ಮೂಲಕ ಚೆಕ್ಕಿನ ಹಣವನ್ನು ಮರುಪಾವತಿ ಮಾಡುವಂತೆ ನೋಟೀಸ್ ಅನ್ನು ನೀಡಿದ್ದು, ಸದರಿ ನೋಟೀಸು ದಿನಾಂಕಃ 19.10.2024 ರಂದು ಖುದ್ದು ಜಾರರಿಯಾಗಿದ್ದರೂ ಸಹ, ಆರೋಪಿತನು ಸದರಿ ಹಣವನ್ನು ವಾಪಸ್ಸು ನೀಡಿರುವುದಿಲ್ಲ ಎಂಬುದಾಗಿ ತನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಪಿ.ಡಬ್ಲ್ಯೂ-1 ರವರು ದೂರಿನ ಸಂಗತಿಗಳಿಗೆ ಅನುಗುಣವಾಗಿ ಪ್ರಮಾಣ ಪೂರ್ವಕ ಹೇಳಿಕೆಯನ್ನು ನೀಡಿರುತ್ತಾರೆ. ಪಿರ್ಯಾದಿ ತನ್ನ ದೂರು ಮತ್ತು ತನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳನ್ನು ಮತ್ತು ನಿ.ಪಿ.1 ರಿಂದ ನಿ.ಪಿ.5 ರ ದಾಖಲೆಗಳನ್ನು ಆರೋಪಿತನು ನಿರ್ದಿಷ್ಟವಾಗಿ ಅಲ್ಲಗಳೆದಿರುತ್ತಾನೆ.

9. ಆರೋಪಿತನು ತನ್ನನ್ನು ತಾನು ಡಿ.ಡಬ್ಲ್ಯೂ-1 ಎಂದು ವಿಚಾರಣೆಗೆ ಒಳಪಡಿಸಿಕೊಂಡು ತನ್ನ ಮುಖ್ಯ ವಿಚಾರಣೆಯಲ್ಲಿ ತನಗೆ ಪಿರ್ಯಾದುದಾರರ ಪರಿಚಯವಿಲ್ಲ ಮತ್ತು ಅವನೊಂದಿಗೆ ತಾನು ಯಾವುದೇ ವ್ಯವಹಾರವನ್ನು ಮಾಡಿರುವುದಿಲ್ಲ. ನೆಹರೂ ನಗರದಲ್ಲಿರುವ ಪಿರ್ಯಾದಿಯ ಅಕ್ಕನ ಮಗ ರಿಚರ್ಡ್ ಫರ್ನಾಂಡೀಸ್ ನ ಮನೆಯಲ್ಲಿ 2024 ರ ಜೂನ್ ನಿಂದ ಸುಮಾರು 3 ತಿಂಗಳವರೆಗೆ ಮಾಸಿಕ 5,000/- ರೂ. ಗಳ ಬಾಡಿಗೆದಾರನಾಗಿ ವಾಸವಾಗಿದ್ದು, ಸದರಿ ಕರಾರಿನಂತೆ ದಿನಾಂಕಃ 03.03.2024 ರಂದು 20,000/- ರೂ. ಗಳನ್ನು ಹಾಗೂ 20.06.2024 ರಂದು 16,000/- ರೂ. ಗಳನ್ನು ಮತ್ತು 10.06.2024 ರಂದು 10,000/- ರೂ. ಗಳಂತೆ ಒಟ್ಟು 46,000/- ರೂ. ಗಳ ಬಾಡಿಗೆಯ ಹಣವನ್ನು ಫೋನ್ ಪೇ ಮೂಲಕ, ತನ್ನ ಹಾಗೂ ತನ್ನ ತಂಗಿ

ಶೋಭಾರವರ ಖಾತೆಯ ಮೂಲಕ ರಿಚರ್ಡ್ ನ ಖಾತೆಗೆ ವರ್ಗಾವಣೆ ಮಾಡಿರುತ್ತೇನೆ.

ಬಾಕಿ 9,000/- ರೂ. ಗಳನ್ನು ಒಂದು ತಿಂಗಳ ನಂತರ ಕೊಡುವುದಾಗಿ ಒಪ್ಪಿ ನಿ.ಪಿ.1ರ ಚೆಕ್ಕನ್ನು ಬಾಡಿಗೆಯ ಹಣದ ಮರುಪಾವತಿ ಬಾಬ್ತು ಪಿರ್ಯಾದಿಗೆ ಕೊಟ್ಟಿದ್ದೇನೆ.

10. ಸದರಿ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಪಿರ್ಯಾದಿಯ ಮೂಲಕ ಈ ಪ್ರಕರಣವನ್ನು ದಾಖಲು ಮಾಡಿರುವುದರಿಂದ, ತನ್ನನ್ನು ನಿರ್ದೋಷಿ ಎಂದು ತೀರ್ಮಾನಿಸಿ ಬಿಡುಗಡೆ ಮಾಡಬೇಕೆಂದು ಕೋರಿ ತನ್ನ ಪ್ರತಿರಕ್ಷೆಯ ಪೂರಕವಾಗಿ ನಿ.ಡಿ.1 ರ ದಾಖಲೆಯನ್ನು ಹಾಜರುಪಡಿಸಿರುತ್ತಾರೆ.

11. ಪಿರ್ಯಾದಿ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ ಆರೋಪಿತನು ಪಿರ್ಯಾದಿಯಿಂದ ಪಡೆದ ಸಾಲದ ಹಣ ಮತ್ತು ಬಾಕಿ ಉಳಿಸಿಕೊಂಡಿದ್ದ ಬಾಡಿಗೆ ಹಣದ ಮರುಪಾವತಿ ಸಲುವಾಗಿ ನಿ.ಪಿ.1 ರ ಚೆಕ್ಕನ್ನು ನೀಡಿದ್ದು, ಸದರಿ ಚೆಕ್ಕನ್ನು ಪಿರ್ಯಾದಿ ಸಂಸ್ಥೆಯು ನಗಧಿಕರಣಕ್ಕಾಗಿ ಹಾಜರುಪಡಿಸಿದಾಗ, ಆರೋಪಿನ **ರೆಫರ್ ಟು ಡ್ರಾಯರ್** ಎಂಬ ಕಾರಣದಿಂದ ನಿ.ಪಿ.2 ರಂತೆ ಅನಾಧರಣಗೊಂಡಿರುತ್ತದೆ. ಈ ಬಗ್ಗೆ ಆರೋಪಿತನಿಗೆ ನಿ.ಪಿ.3 ರಂತೆ ಪಿರ್ಯಾದಿ ಸಂಸ್ಥೆಯು ನೀಡಿದ ನೋಟಿಸು ನಿ.ಪಿ.5 ರಂತೆ ಆರೋಪಿತನಿಗೆ ಜಾರಿಯಾಗಿದ್ದರೂ ಸಹ, ನಿಗಧಿತ ಕಾಲಾವಧಿಯಲ್ಲಿ ಸದರಿ ನೋಟೀಸಿನಲ್ಲಿ ಸೂಚಿಸಿದಂತೆ ಆರೋಪಿತನು ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಸದರಿ ಆರೋಪಿತನು ಪಿ.ಡಬ್ಲ್ಯೂ-1 ರವರ ಪಾಟೀ ಸವಾಲಿನಲ್ಲಿ ಪಿರ್ಯಾದುದಾರರ ಆರ್ಥಿಕ ಸಾಮರ್ಥ್ಯವನ್ನು ಪ್ರಶ್ನಿಸಿದ್ದು, ಈ ಕುರಿತಂತೆ ಪಿರ್ಯಾದುದಾರರು ತಾನು ಎಲೆಕ್ಟ್ರಿಕ್ ಲ್ಯಾಬ್ ಹೆಲ್ಪರ್ ಆಗಿ ನಿವೃತ್ತಿಯಾಗಿರುತ್ತೇನೆ ಹಾಗೂ ತನಗೆ ಮಾಸಿಕ 16,500/-ರೂ.ಗಳ ಪಿಂಚಣಿ

ಸಹ ಬರುತ್ತಿದ್ದು, ತಾನು ಸ್ವಂತ ಮನೆ ಹಾಗೂ ಚಿಕನ್ ಅಂಗಡಿಯನ್ನು ಹೊಂದಿರುತ್ತೇನೆ ಎಂಬುದಾಗಿ ಸ್ಪಷ್ಟವಾಗಿ ಉತ್ತರಿಸಿರುತ್ತಾರೆ.

12. ಅದೇರೀತಿಯಾಗಿ, ಆರೋಪಿತನು ತಾನು ಸರ್ಕಾರಿ ನೌಕರನಾಗಿರುವುದರಿಂದ ಹಲವು ಜನರಿಂದ ಸಾಲವನ್ನು ಪಡೆದಕೊಂಡು, ಸದರಿ ಹಣವನ್ನು ಮರುಪಾವತಿ ಮಾಡುವ ಸಲುವಾಗಿ ಚೆಕ್ಕುಗಳನ್ನು ನೀಡಿ, ಸದರಿ ಚೆಕ್ಕುಗಳು ಬೌನ್ಸ್ ಆಗುವಂತೆ ಮಾಡಿಕೊಂಡಿರುತ್ತಾನೆ. ಅಲ್ಲದೇ, ಆರೋಪಿತನ ವಿರುದ್ಧ 5 ಚೆಕ್ ಬೌನ್ಸ್ ಕೇಸುಗಳು ವಿಚಾರಣೆಗೆ ಬಾಕಿ ಇದ್ದು, ಸಿ.ಸಿ. 542/2025 ರಲ್ಲಿ ಶಿಕ್ಷೆಯಾಗಿರುವುದಾಗಿ ಸ್ವತಃ ಒಪ್ಪಿಕೊಂಡಿರುತ್ತಾನೆ. ಆರೋಪಿತನು ತನ್ನ ಸರ್ಕಾರಿ ನೌಕರಿಯನ್ನು ದುರುಪಯೋಗಪಡಿಸಿಕೊಂಡು ಜನರಿಗೆ ನಂಬಿಸಿ, ಮೋಸ ಮಾಡುವ ಪ್ರವೃತ್ತಿವುಳ್ಳವನಾಗಿರುತ್ತಾನೆ. ಸದರಿ ಆರೋಪಿತನು ತನ್ನ ಚೆಕ್ ದುರುಪಯೋಗವಾಗಿರುವ ಬಗ್ಗೆ ದೂರನ್ನು ನೀಡಿರುವುದಿಲ್ಲ. ಒಂದು ವೇಳೆ ಸದರಿ ಆರೋಪಿತನು ತಾನು ಸಾಲವಾಗಿ ಪಡೆದಿದ್ದ ಹಣವನ್ನು ಮರುಪಾವತಿ ಮಾಡಿದ್ದರೆ, ಭದ್ರತೆಗಾಗಿ ನೀಡಿದಂತಹ ದಾಖಲೆಗಳನ್ನು ವಾಪಸ್ಸು ಪಡೆದುಕೊಳ್ಳುತ್ತಿದ್ದನು. ಆದರೆ, ಸದರಿ ಆರೋಪಿತನು ಪಿರ್ಯಾದಿಯಿಂದ ಪಡೆದ ಸಾಲವನ್ನು ಮರುಪಾವತಿ ಮಾಡಬೇಕು ಎನ್ನುವ ಬಾಧ್ಯತೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾನೆ. ಸದರಿ ಆರೋಪಿತನು ತನ್ನ ಪ್ರತಿರಕ್ಷೆಯನ್ನು ಸಾಬೀತುಪಡಿಸಲು ವಿಫಲನಾಗಿರುತ್ತಾನೆ. ಅಲ್ಲದೇ, ಆರೋಪಿತನು ನೀಡಿದ ನಿ.ಪಿ.1 ರ ಚೆಕ್ಕು "Refer to drawer" ಎಂಬ ಕಾರಣಕ್ಕಾಗಿ ಅನಾಧರಣಗೊಂಡಿರುತ್ತದೆ. ಆದಕಾರಣ, ಸದರಿ ಆರೋಪಿತನನ್ನು ಶಿಕ್ಷೆಗೆ ಒಳಪಡಿಸಬೇಕೆಂದು ಮತ್ತು ಆರೋಪಿಯಿಂದ ತನಗೆ ಪರಿಹಾರವನ್ನು ಸಹ ಕೊಡಿಸಬೇಕೆಂದು ಸಾಧನೆ ಮಾಡಿರುತ್ತಾರೆ.

13. ಸದರಿ ಪಿರ್ಯಾದಿಯು ತನ್ನ ಪ್ರತಿರಕ್ಷೆಗೆ ಪೂರಕವಾಗಿ ಮಾನ್ಯ ಸರ್ವೋಚ್ಛ ನ್ಯಾಯಾಲಯದ (2019) 4 SCC 197 (Bir Singh Vs. Mukesh Kumar), (2010)11 SCC 441 (Rangappra Vs. Sri. Mohan) ಮತ್ತು (2012) 13 SCC 375 (Laxmi Dyechem Vs. State of Gujarat and others) ತೀರ್ಪುಗಳನ್ನು ಹಾಜರುಪಡಿಸಿರುತ್ತಾರೆ.

14. ಆರೋಪಿ ಪರ ವಕೀಲರು ತಮ್ಮ ಲಿಖಿತ ವಾದದಲ್ಲಿ ಆರೋಪಿತನು ಪಿರ್ಯಾದಿಯಿಂದ ಯಾವುದೇ ಹಣ ಪಡೆದಿರುವುದಿಲ್ಲ ಮತ್ತು ಪಿರ್ಯಾದಿಯ ಮನೆಯನ್ನು ಬಾಡಿಗೆಗಾಗಿ ಪಡೆದಿರುವುದಿಲ್ಲ. ಸದರಿ ಪಿರ್ಯಾದಿಯು ಸಾಕಷ್ಟು ಆರ್ಥಿಕ ಸಾಮರ್ಥ್ಯವನ್ನು ಹೊಂದಿಲ್ಲ ಮತ್ತು ಅವನಿಗೆ ಯಾವುದೇ ಆರ್ಥಿಕ ಮೂಲಗಳು ಇರುವುದಿಲ್ಲ ಹಾಗೂ ಅವನಿಗೆ ಬರುವ ಪಿಂಚಣಿ ಹಣವು ಅವನ ಜೀವನ ನಿರ್ವಹಣೆಗೆ ಸಾಕಾಗುತ್ತದೆ. ಆರೋಪಿತನು ಪಿರ್ಯಾದಿಯ ಅಕ್ಕನ ಮಗ ರಿಚರ್ಡ್ ಎನ್ನುವವರ ಮನೆಯಲ್ಲಿ ಬಾಡಿಗೆಗೆ ಇದ್ದು, ಬಾಡಿಗೆ ಬಾಬ್ತು ಹಣವನ್ನು ತನ್ನ ಮತ್ತು ತನ್ನ ತಂಗಿಯ ಬ್ಯಾಂಕ್ ಖಾತೆಗಳಿಂದ ವರ್ಗಾವಣೆ ಮಾಡಿದ್ದು, ರಿಚರ್ಡ್ ಅವರಿಗೆ ಕೇವಲ 5,000/- ರೂ. ಗಳನ್ನು ಕೊಡುವುದು ಬಾಕಿ ಇರುತ್ತದೆ. ಸದರಿ 5,000/- ರೂ. ಗಳ ಮರುಪಾವತಿ ಬಾಬ್ತು ನಿ.ಪಿ.1 ರ ಚೆಕ್ಕನ್ನು ರಿಚರ್ಡ್ ರವರಿಗೆ ನೀಡಿದ್ದು, ಪಿರ್ಯಾದಿಯು ಹೇಳುವಂತೆ ಅವನಿಗೆ ನಿ.ಪಿ.1 ರ ಚೆಕ್ಕನ್ನು ಆರೋಪಿತನು ನೀಡಿರುವುದಿಲ್ಲ. ಸದರಿ ರಿಚರ್ಡ್ ಇವನಿಗೆ 5,000/- ರೂ. ಗಳ ಮರುಪಾವತಿ ಬಾಬ್ತು ನೀಡಿದ್ದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಪಿರ್ಯಾದಿಯ ಮೂಲಕ ಈ ಪ್ರಕರಣವನ್ನು ದಾಖಲು ಮಾಡಿರುತ್ತಾರೆ.

15. ಮುಂದುವರೆದು, ಆರೋಪಿತನು ನಿ.ಡಿ. 1 ರಂತೆ, ತನ್ನ ಸಹೋದರಿ ಶೋಭಾ ರವರ ಬ್ಯಾಂಕ್ ಖಾತೆಯಿಂದ ರಿಚರ್ಡ್ ನ ಖಾತೆಗೆ ಹಣವನ್ನು ವರ್ಗಾವಣೆ ಮಾಡಿರುತ್ತಾರೆ. ಸದರಿ ಪಿರ್ಯಾದಿಯು ತನ್ನ ಪಾಟೀ ಸವಾಲಿನಲ್ಲಿ ದ್ವಂದ್ವ ಹೇಳಿಕೆಗಳನ್ನು ನೀಡಿರುತ್ತಾನೆ. ಆರೋಪಿತನಿಗೆ ತನ್ನ ಮನೆಯನ್ನು ಬಾಡಿಗೆ ಕೊಟ್ಟ ಬಗ್ಗೆ ಕರಾರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಅಲ್ಲದೇ, ಆರೋಪಿತನ ಕುರಿತು ತನಗೆ ಯಾವುದೇ ಖುದ್ದು ಮಾಹಿತಿ ಇಲ್ಲವೆಂದು ಸ್ವತಃ ಒಪ್ಪಿಕೊಂಡಿರುತ್ತಾನೆ. ಬಾಡಿಗೆ ಹಣವು ಯಾವ ದಿನದಿಂದ ಯಾವ ದಿನದವರೆಗೆ ಬಾಕಿ ಉಳಿಸಿಕೊಂಡಿದ್ದಾನೆ ಎನ್ನುವ ನಿಖರ ಮಾಹಿತಿ ತನಗೆ ಇಲ್ಲ ಎಂದು ಸ್ವತಃ ಪಿರ್ಯಾದಿದಾರರು ಒಪ್ಪಿಕೊಂಡಿರುತ್ತಾರೆ. 2016 ರಲ್ಲಿ ನೋಟ್ ಬ್ಯಾನ್ ಆದ ನಂತರ 20,000/- ಕ್ಕಿಂತ ಹೆಚ್ಚು ಮೊತ್ತದ ವ್ಯವಹಾರವನ್ನು ನಗದಾಗಿ ಮಾಡುವಂತಿಲ್ಲ. ಆದರೂ ಸಹ ಪಿರ್ಯಾದಿಯು ಕಾನೂನುಬಾಹಿರವಾಗಿ ಈ ವ್ಯವಹಾರವನ್ನು ಮಾಡಿರುವುದಾಗಿ ಸ್ವತಃ ಒಪ್ಪಿಕೊಂಡಿರುತ್ತಾರೆ. ಅದೇರೀತಿಯಾಗಿ, ರಿಚರ್ಡ್ ಎನ್ನುವ ವ್ಯಕ್ತಿಯು ತನ್ನ ಅಕ್ಕನ ಮಗ ಹಾಗೂ ಅವನು ಸ್ವಂತ ಮನೆಯನ್ನು ಹೊಂದಿದ್ದು, ಅವನು ಮನೆಗಳನ್ನು ಬಾಡಿಗೆಗೂ ಸಹ ಕೊಟ್ಟಿದ್ದಾನೆ ಎಂದು ಪಿ.ಡಬ್ಲ್ಯೂ-1 ರವರು ಒಪ್ಪಿಕೊಂಡಿರುತ್ತಾರೆ. ಆದಕಾರಣ, ಕಾನೂನಿನ ಪೂರ್ವಭಾವನೆಯು ಪಿರ್ಯಾದಿ ಪರವಾಗಿ ಇದ್ದರೂ ಸಹ ಪಿರ್ಯಾದಿಯು ತನ್ನ ಪ್ರಕರಣವನ್ನು ನಿಸ್ಸಂಶಯವಾಗಿ ಸಾಬೀತುಪಡಿಸಲು ವಿಫಲನಾಗಿರುವುದರಿಂದ, ಸಂಶಯದ ಆಧಾರದ ಮೇಲೆ ಆರೋಪಿತನನ್ನು ಬಿಡುಗಡೆ ಮಾಡಬೇಕೆಂದು ಸಾಧನೆ ಮಾಡಿರುತ್ತಾರೆ.

16. **ಆರೋಪಿತನು ತನ್ನ ಮುಖ್ಯ ವಿಚಾರಣೆ ಹಾಗೂ ತನ್ನ ವಾದ ಮಂಡನೆಯ ಕಾಲಕ್ಕೆ ಹಾಗೂ ಪಿ.ಡಬ್ಲ್ಯೂ-1 ರವರ ಪಾಟೀ ಸವಾಲಿನಲ್ಲಿ ತೆಗೆದುಕೊಂಡ ಪ್ರತಿರಕ್ಷೆಗಳು ಈ ಕೆಳಕಂಡಂತಿರುತ್ತವೆ.**

I. ಪಿರ್ಯಾದಿಯು ನಿ.ಪಿ.1 ರ ಚೆಕ್ಕಿನಲ್ಲಿ ಕಾಣಿಸಿದ ಮೊತ್ತವನ್ನು ಆರೋಪಿತನಿಗೆ ಸಾಲವಾಗಿ ನೀಡುವಷ್ಟು ಆರ್ಥಿಕ ಸಾಮರ್ಥ್ಯವನ್ನು ಹೊಂದಿಲ್ಲ.

II. 20,000/- ರೂ. ಕ್ಕಿಂತ ಹೆಚ್ಚು ನಗದು ವ್ಯವಹಾರವನ್ನು ಮಾಡುವುದು ಕಾನೂನುಬಾಹಿರವಾಗಿರುತ್ತದೆ.

III. ಪಿರ್ಯಾದಿ ಮತ್ತು ಆರೋಪಿಯ ನಡುವೆ ಯಾವುದೇ ವ್ಯವಹಾರ ನಡೆದಿರುವುದಿಲ್ಲ.

IV. ತಾನು ಆರೋಪಿತನ ಅಕ್ಕನ ಮಗ ರಿಚರ್ಡ್ ನ ಮನೆಯಲ್ಲಿ ಬಾಡಿಗೆಗೆ ಇದ್ದು, ತಾನು ಬಾಕಿ ಉಳಿಸಿಕೊಂಡಿದ್ದ 5,000/- ರೂ. ಗಳ ಬಾಡಿಗೆ ಹಣದ ಮರುಪಾವತಿ ಬಾಬ್ತು ನಿ.ಪಿ.1 ರ ಚೆಕ್ಕನ್ನು ರಿಚರ್ಡ್ ಗೆ ನೀಡಿದ್ದು, ಸದರಿ ದಾಖಲೆಯನ್ನು ದುರುಪಯೋಗಪಡಿಸಿಕೊಂಡು, ಈ ಪ್ರಕರಣವನ್ನು ದಾಖಲಿಸಿದ್ದಾರೆ.

17. ಪಕ್ಷಗಾರರು ಹಾಜರುಪಡಿಸಿರುವ ಸಾಕ್ಷ್ಯಧಾರಗಳನ್ನು ಮತ್ತು ಪಿರ್ಯಾದಿಯು ಹಾಗೂ ಆರೋಪಿತನು ತೆಗೆದುಕೊಂಡಿರುವ ಮೇಲಿನ ಪ್ರತಿರಕ್ಷೆಗಳನ್ನು ಗಮನಿಸಿದಾಗ, ಪಿ.ಡಬ್ಲ್ಯೂ-1 ರವರ ಪಾಟೀ ಸವಾಲಿನಲ್ಲಿ ಆರೋಪಿತನು ಪಿರ್ಯಾದಿದಾರರ ಅಕ್ಕನ ಮಗ ರಿಚರ್ಡ್ ನಿಗೆ ಕೇವಲ 5,000/- ರೂ. ಗಳ ಬಾಡಿಗೆ ಕೊಡುವುದು ಬಾಕಿ ಉಳಿಸಿಕೊಂಡಿದ್ದು, ಆ ಹಣದ ಮರುಪಾವತಿ ಬಾಬ್ತು ನಿ.ಪಿ.1 ಚೆಕ್ಕನ್ನು ರಿಚರ್ಡ್ ನಿಗೆ ನೀಡಿರುವುದಾಗಿ ಸಲಹೆ ನೀಡಿದ್ದು, ಸದರಿ

ಸಲಹೆಯನ್ನು ಪಿರ್ಯಾದಿದಾರರು ಅಲ್ಲಗಳೆದಿರುತ್ತಾರೆ. ಆದರೆ, ಆರೋಪಿತನು ಮುಖ್ಯ ವಿಚಾರಣಾ ಹೇಳಿಕೆಯ ಮೊದಲನೇಯ ಪುಟದ 8 ನೇ ಸಾಲಿನಲ್ಲಿ,

> **"ಬಾಕಿ 9,000/- ರೂ. ಗಳನ್ನು ಒಂದು ತಿಂಗಳ ನಂತರ ಕೊಡವುದಾಗಿ ಒಪ್ಪಿ ನಿ.ಪಿ.1 ರ ಚೆಕ್ಕನ್ನು ಬಾಡಿಗೆ ಹಣದ ಮರುಪಾವತಿ ಬಾಬ್ತು ಪಿರ್ಯಾದಿಗೆ ಕೊಟ್ಟಿದ್ದೇನೆ"** ಎಂದು ಸ್ವತಃ ಹೇಳಿಕೆಯನ್ನು ನೀಡಿದ್ದಾರೆ.

18. ಪಿ.ಡಬ್ಲ್ಯೂ-1 ರವರ ಪಾಟೀ ಸವಾಲಿನಲ್ಲಿ, ಆರೋಪಿ ಪರ ವಕೀಲರು 5,000/- ರೂಗಳ ಮರುಪಾವತಿ ಬಾಬ್ತು ನಿ.ಪಿ.1 ರ ಚೆಕ್ಕನ್ನು ರಿಚರ್ಡ್ ನಿಗೆ ನೀಡಿರುವುದಾಗಿ ಹೇಳಿದ್ದು, ಆರೋಪಿತನು ಸ್ವತಃ ಪಿರ್ಯಾದಿಗೆ 9,000/- ರೂ. ಗಳ ಮರುಪಾವತಿ ಬಾಬ್ತು ಸದರಿ ಚೆಕ್ಕನ್ನು ಕೊಟ್ಟಿದ್ದೇನೆ ಎಂಬುದಾಗಿ ಒಪ್ಪಿಕೊಂಡಿದ್ದಾರೆ. ಆದರಿಂದ, ನಿ.ಪಿ.1 ರ ಚೆಕ್ಕನ್ನು ಆರೋಪಿತನು ಮುಕ್ತ ಸಮ್ಮತಿಯಿಂದ ಪಿರ್ಯಾದಿಗೆ ಕೊಟ್ಟಿದ್ದಾನೆ ಎಂಬುದಾಗಿ ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ಆದಕಾರಣ, ಪಿರ್ಯಾದಿಯ ಪರವಾಗಿ ಲಿಖಿತ ಪತ್ರಗಳ ವರ್ಗವಣೆ ಕಾಯಿದೆಯ ಕಲಂ 118 ಮತ್ತು 139 ರ ಅಡಿಯಲ್ಲಿ ಇರುವ ಕಾನೂನಿನ ಪೂರ್ವಭಾವನೆಗೆ ಬರಬೇಕಾಗುತ್ತದೆ. ಪಿರ್ಯಾದಿ ಪರವಾಗಿ ಹಾಜರುಪಡಿಸಿರುವ ತೀರ್ಪುಗಳಲ್ಲಿಯೂ ಸಹ ಯಾವುದೇ ಒಂದು ಲಿಖಿತ ಪತ್ರವನ್ನು ಹೊಂದಿರುವ ಧಾರಕನ ಪರವಾಗಿ ಕಾನೂನಿನ ಪೂರ್ವಭಾವನೆ ಮಾಡಬಹುದು ಎಂಬುದಾಗಿ ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ. ಆದಕಾರಣ, ಕಾನೂನಿನ ಪೂರ್ವಭಾವನೆಯು ಪಿರ್ಯಾದಿ ಪರ ಇದೆ. ನಿ.ಪಿ.1 ರ ಚೆಕ್ಕನ್ನು ಪಿರ್ಯಾದಿ ಪರವಾಗಿ ನೀಡಿರುವುದನ್ನು ಆರೋಪಿತನು ಸ್ವತಃ ಒಪ್ಪಿಕೊಂಡಿರುವುದರಿಂದ, ಸದರಿ ಚೆಕ್ಕು '**Refer to drawer'** ಎಂಬ ಕಾರಣಕ್ಕಾಗಿ ನಿ.ಪಿ.2 ರಂತೆ

ಅನಾಧಾರಣೆಗೊಂಡಿದ್ದರೂ ಸಹ, ಸದರಿ ನಿ.ಪಿ.1 ರ ದಾಖಲೆಯಲ್ಲಿನ ಸಹಿಯು ಆರೋಪಿತನ ಸಹಿ ಎಂದು ಕಂಡು ಬರುತ್ತದೆ. ಸದರಿ ಚೆಕ್ಕಿಗೆ ತಾನು ಸಹಿ ಮಾಡಿಲ್ಲ ಎಂಬುದಾಗಿ ಆರೋಪಿತನು ತನ್ನ ಮುಖ್ಯ ವಿಚಾರಣೆಯಲ್ಲಿ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಆದಕಾರಣ, ಸದರಿ ಚೆಕ್ಕನ್ನು ಪಿರ್ಯಾದಿಯ ಪರವಾಗಿ ಆರೋಪಿತನೇ ನೀಡಿದ್ದಾನೆ ಎಂಬುದು ಸಾಬೀತಾಗಿರುತ್ತದೆ.

19. ನಿ.ಪಿ.1 ರ ಚೆಕ್ಕು ನಿ.ಪಿ.2 ರಂತೆ ಅನಾಧರಣಗೊಂಡ ಕೂಡಲೇ, ದಿನಾಂಕಃ 25.09.2024 ರಂದು, ನಿ.ಪಿ.3 ರಂತೆ ಆರೋಪಿತನಿಗೆ ಪಿರ್ಯಾದಿಯು ಚೆಕ್ಕಿನ ಮೊತ್ತವನ್ನು ಮರುಪಾವತಿ ಮಾಡುವಂತೆ ಸೂಚಿಸಿ, ಕಾನೂನುಬದ್ಧ ನೋಟೀಸ್ ನ್ನು ನೀಡಿರುತ್ತಾರೆ. ಸದರಿ ನೋಟೀಸು ನಿ.ಪಿ.5 ರಂತೆ ಆರೋಪಿತನಿಗೆ ಜಾರಿಯಾಗಿರುತ್ತದೆ. ಸದರಿ ನೋಟೀಸಿಗೆ ಆರೋಪಿತನು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಅಲ್ಲದೇ, ನೋಟೀಸು ತನಗೆ ಜಾರಿಯಾಗಿಲ್ಲ ಎಂದು ಯಾವುದೇ ಪ್ರತಿರಕ್ಷೆಯನ್ನು ತೆಗೆದುಕೊಂಡಿರುವುದಿಲ್ಲ. ಒಂದು ವೇಳೆ ಸದರಿ ಆರೋಪಿತನು ಪಿರ್ಯಾದಿಯೊಂದಿಗೆ ಯಾವುದೇ ವ್ಯವಹಾರವನ್ನು ಮಾಡಿಲ್ಲ ಎಂದಾದರೆ, ನಿ.ಪಿ.3 ರ ನೋಟೀಸು ನಿ.ಪಿ.5 ರಂತೆ ಆರೋಪಿತನಿಗೆ ಜಾರಿಯಾದ ಕೂಡಲೇ ಸದರಿ ಆರೋಪಿತನು ನಿ.ಪಿ.3 ರ ನೋಟೀಸಿಗೆ ಸೂಕ್ತ ಉತ್ತರವನ್ನು ಸಕಾಲದಲ್ಲಿ ನೀಡುತ್ತಿದ್ದನು. ಆದರೆ, ಅಂತಹ ಉತ್ತರವನ್ನು ಆರೋಪಿತನು ನೀಡದೇ ಇರುವುದು ಆರೋಪಿತನ ಪ್ರತಿರಕ್ಷೆಯ ಕುರಿತು ಸಂಶಯ ಉಂಟಾಗುತ್ತದೆ.

20. 20,000/- ರೂ. ಗಳಿಗಿಂತ ಹೆಚ್ಚಿನ ಹಣದ ವ್ಯವಹಾರವನ್ನು ಖಾತೆ ಮೂಲಕ ಮಾಡಬೇಕೆಂಬುದಾಗಿ ಕಾನೂನು ಅಗತ್ಯಪಡಿಸುತ್ತದೆ. ಆದರೆ, 20,000/- ರೂ. ಕ್ಕಿಂತ ಹೆಚ್ಚಿನ ಹಣವನ್ನು ನಗದಾಗಿ ಮಾಡಲೇಬಾರದೆಂಬ ಯಾವುದೇ ಕಡ್ಡಾಯ ನಿಯಮ ಇರುವುದಿಲ್ಲ. ಆದ್ದರಿಂದ, ಸದರಿ ಆರೋಪಿತನ

ಪ್ರತಿರಕ್ಷೆಯನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಪಿರ್ಯಾದಿಯು ತನಗೆ ಪರಿಚಯಸ್ಥನಲ್ಲ ಎಂದು ಆರೋಪಿತನು ತನ್ನ ಪ್ರತಿರಕ್ಷೆಯಲ್ಲಿ ಸ್ಪಷ್ಟ ಹೇಳಿಕೆಯನ್ನು ನೀಡಿದ್ದಾನೆ. ಒಂದು ವೇಳೆ ಪಿರ್ಯಾದಿಯು ಆರೋಪಿತನಿಗೆ ಪರಿಚಯವಿಲ್ಲವಾದರೆ, ಸದರಿ ಪಿರ್ಯಾದಿಯು ರಿಚರ್ಡ್ ಫರ್ನಾಂಡೀಸ್ ನ ಮಾವ ಎಂದು ಆರೋಪಿತನಿಗೆ ಹೇಗೆ ತಿಳಿಯಲು ಸಾಧ್ಯ? ಅಲ್ಲದೇ, ನಿ.ಪಿ.1 ರ ಚೆಕ್ಕನ್ನು ಆರೋಪಿತನು ಸ್ವತಃ ಪಿರ್ಯಾದಿಗೆ ಕೊಟ್ಟಿದ್ದೇನೆ ಎಂಬುದಾಗಿ, ತಮ್ಮ ಮುಖ್ಯ ವಿಚಾರಣೆಯಲ್ಲಿ ಸ್ಪಷ್ಟ ಹೇಳಿಕೆ ನೀಡಿದ್ದಾರೆ.

21. ಆರೋಪಿತನು ಪಿರ್ಯಾದಿಯ ಅಕ್ಕನ ಮಗನಾದ ರಿಚರ್ಡ್ ಫರ್ನಾಂಡೀಸ್ ನ ಮನೆಯಲ್ಲಿ ಬಾಡಿಗೆದಾರನಾಗಿ ವಾಸವಾಗಿದ್ದು, ಸದರಿ ಬಾಡಿಗೆ ಹಣದ ಮರುಪಾವತಿ ಬಾಬ್ತು ರಿಚರ್ಡ್ ಫರ್ನಾಂಡೀಸ್ ನಿಗೆ ನಿ.ಪಿ.1 ರ ಚೆಕ್ಕನ್ನು ಆರೋಪಿತನು ಕೊಟ್ಟಿರುವುದಾಗಿ, ಪಿ.ಡಬ್ಲ್ಯೂ-1 ರವರ ಪಾಟೀ ಸವಾಲಿನಲ್ಲಿ ಆರೋಪಿ ಪರ ವಕೀಲರು ಪ್ರತಿರಕ್ಷೆ ತೆಗೆದುಕೊಂಡಿದ್ದಾರೆ. ಪಿ.ಡಬ್ಲ್ಯೂ-1 ರವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ, ತಾನು ಆರೋಪಿತನಿಗೆ ಬಾಡಿಗೆಗಾಗಿ ಯಾವುದೇ ಮನೆಯನ್ನು ಕೊಟ್ಟಿಲ್ಲ ಎಂಬ ಸಲಹೆಯನ್ನು ನಿರ್ದಿಷ್ಟವಾಗಿ ಅಲ್ಲಗಳೆದಿದ್ದಾರೆ. ಮುಂದುವರೆದು, 2024 ರಿಂದ ಒಟ್ಟು 11 ತಿಂಗಳ ಬಾಡಿಗೆಯನ್ನು ಆರೋಪಿತನು ಬಾಕಿ ಉಳಿಸಿಕೊಂಡಿದ್ದಾನೆ ಎಂಬುದಾಗಿ ಸದರಿ ಪಿರ್ಯಾದುದಾರರು ಸ್ವತಃ ಹೇಳಿಕೆಯನ್ನು ನೀಡಿದ್ದಾರೆ. ಅಲ್ಲದೇ, ಆರೋಪಿತನು ತನ್ನ ತಂದೆಯ ಆರೋಗ್ಯ ಸಮಸ್ಯೆಗಾಗಿ ಚಿಕಿತ್ಸೆ ಕೊಡಿಸಲು ಹಣದ ಅಗತ್ಯವಿದೆ ಎಂದು ಹೇಳಿ 13.06.2026 ರಂದು ತನಗೆ ಬಂದಿದ್ದ ಪ್ರಾವಿಡೆಂಟ್ ಹಣದ ಪೈಕಿ 95,000/- ರೂ. ಗಳನ್ನು ನಗದಾಗಿ ಪಡೆದುಕೊಂಡಿರುವುದಾಗಿ ಸ್ಪಷ್ಟ ಹೇಳಿಕೆಯನ್ನು ನೀಡಿದ್ದಾರೆ.

22. ಆರೋಪಿತನು ಪಿರ್ಯಾದಿಯ ಮನೆಯಲ್ಲಿ ಬಾಡಿಗೆಗಾಗಿ ವಾಸವಾಗಿದ್ದನು ಎನ್ನುವ ಕುರಿತು ಪಿರ್ಯಾದಿದಾರರು ಬಾಡಿಗೆ ಕರಾರನ್ನು ನ್ಯಾಯಾಲಯದ ಹಾಜರುಪಡಿಸಿಲ್ಲ ಎಂಬುದು ನಿಜ. ಸದರಿ ಆರೋಪಿ ಮತ್ತು ಪಿರ್ಯಾದಿ ನಡುವೆ ಆದಂತಹ ಬಾಡಿಗೆ ಕರಾರು ಮೌಖಿಕ ಕರಾರೇ ಅಥವಾ ಲಿಖಿತ ಕರಾರೇ ಎನ್ನುವ ಕುರಿತು ಪಿರ್ಯಾದಿಯೂ ಸಹ ತನ್ನ ದೂರಿನಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಯಾವುದೇ ಸ್ಪಷ್ಟ ಮಾಹಿತಿಯನ್ನು ನೀಡಿರುವುದಿಲ್ಲ. ಆದರೆ, ಈ ಸಂದರ್ಭದಲ್ಲಿ ಆರೋಪಿತನು ತನ್ನ ಪ್ರತಿರಕ್ಷೆಯಲ್ಲಿ ಹೇಳಿದ ಸಂಗತಿಗಳನ್ನು ಗಮನಿಸುವುದು ಅಗತ್ಯ.

23. ಸದರಿ ಪಿ.ಡಬ್ಲ್ಯೂ-1 ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷಿಯ, 2 ನೇ ಸಾಲಿನಲ್ಲಿ

> **"ನೆಹರೂ ನಗರದಲ್ಲಿರುವ ಪಿರ್ಯಾದಿಯ ಅಕ್ಕನ ಮಗ ರಿಚರ್ಡ್ ಫರ್ನಾಂಡೀಸ್ ನ ಮನೆಯಲ್ಲಿ 2024 ರ ಜೂನ್ ನಿಂದ ಸುಮಾರು 3 ತಿಂಗಳವರೆಗೆ ಮಾಸಿಕ 5,000/- ರೂ. ಗಳ ಬಾಡಿಗೆಯಂತೆ ನಾನು ಬಾಡಿಗೆದಾರನಾಗಿ ವಾಸವಾಗಿದ್ದೆ. ಸದರಿ ಕರಾರಿನಂತೆ ನಾನು ದಿನಾಂಕಃ 03.03.2024 ರಂದು 20,000/- ರೂ. ಗಳನ್ನು ದಿನಾಂಕಃ 20.06.2024 ರಂದು 16,000/- ರೂ. ಗಳನ್ನು ಹಾಗೂ ದಿನಾಂಕಃ 10.06.2024 ರಂದು 10,000/- ರೂ. ಗಳಂತೆ ಒಟ್ಟು 46,000/- ರೂ. ಗಳ ಬಾಡಿಗೆ ಹಣವನ್ನು ಫೋನ್ ಪೇ ಮೂಲಕ ತನ್ನ ಹಾಗೂ ತನ್ನ ಸಹೋದರಿ ಶೋಭಾ ಎಂ. ರವರ ಖಾತೆ ಮೂಲಕ ಪಿರ್ಯಾದಿಯ ಅಕ್ಕನ ಮಗನಿಗೆ ಪಾವತಿ ಮಾಡಿದ್ದೇನೆ. ಬಾಕಿ 9,000/- ರೂ. ಗಳನ್ನು ಒಂದು ತಿಂಗಳ ನಂತರ ಕೊಡುವುದಾಗಿ ಒಪ್ಪಿ**

ನಿ.ಪಿ.1 ರ ಚೆಕ್ಕುನ್ನು ಬಾಡಿಗೆ ಹಣದ ಮರುಪಾವತಿ ಬಾಬ್ತು ಪಿರ್ಯಾದಿಗೆ ಕೊಟ್ಟಿದ್ದೇನೆ." ಎಂದು ಹೇಳಿದ್ದಾರೆ.

24. ಸದರಿ ಆರೋಪಿತನ ಹೇಳಿಕೆಯಂತೆ 2024 ಜೂನ್ ನಿಂದ ಮೂರು ತಿಂಗಳವರೆಗೆ ಪಿರ್ಯಾದುದಾರರ ಅಕ್ಕನ ಮಗ ರಿಚರ್ಡ್ ಫರ್ನಾಂಡೀಸ್ ನ ಮನೆಯಲ್ಲಿ ಆರೋಪಿತನು ಮಾಸಿಕ 5,000/-ರೂ.ಗಳಂತೆ ಬಾಡಿಗೆದಾರನಾಗಿ ವಾಸವಾಗಿದ್ದನು. ಆದರೆ, ನಿ.ಡಿ.1 ರ ದಾಖಲೆ ಹಾಗೂ ಆರೋಪಿತನು ನೀಡಿದ ಹೇಳಿಕೆಯನ್ನು ಗಮನಿಸಿದಾಗ, ನಿ.ಡಿ.1 ರಂತೆ ದಿನಾಂಕಃ 03.03.2023 ರಂದು 20,000/- ರೂ. ಗಳನ್ನು 10.06.2024 ರಂದು 10,000/- ರೂ. ಗಳನ್ನು 20.06.2023 ರಂದು 16,000/- ರೂ. ಗಳನ್ನು ಆರೋಪಿ ಮತ್ತು ಶೋಭಾ ಎಂಬುವವರ ಖಾತೆಯ ಮೂಲಕ ರಿಚರ್ಡ್ ಫರ್ನಾಂಡೀಸ್ ನ ಖಾತೆಗೆ ಹಣವನ್ನು ವರ್ಗಾವಣೆ ಮಾಡಿರುವುದು ಕಂಡು ಬರುತ್ತದೆ. ಇಲ್ಲಿ ಗಮನಿಸಬೇಕಾದ ಪ್ರಮುಖವಾದ ಅಂಶವೇನೆಂದರೆ, 2024 ರ ಜೂನ್ ತಿಂಗಳಿನಿಂದ ಆರೋಪಿತನು ಸುಮಾರು ಮೂರು ತಿಂಗಳವರೆಗೆ ರಿಚರ್ಡ್ ಫರ್ನಾಂಡೀಸ್ ನ ಮನೆಯಲ್ಲಿ ಬಾಡಿಗೆಗೆ ವಾಸವಾಗಿದ್ದರೆ, ಸದರಿ ಮನೆಗೆ ಬಾಡಿಗೆಗೆ ಹೋಗುವ ಮೊದಲೇ ದಿನಾಂಕಃ 03.03.2024, 20.06.2024 ಮತ್ತು 10.06.2024 ರಂದು ನಿ.ಡಿ. 1 ರಲ್ಲಿ ಕಂಡಂತೆ ಪಿರ್ಯಾದುದಾರರಿಗೆ ರಿಚರ್ಡ್ ಫರ್ನಾಂಡೀಸ್ ನ ಖಾತೆಗೆ ಹಣವನ್ನು ವರ್ಗಾವಣೆ ಮಾಡುವ ಅಗತ್ಯವಾದರೂ ಏನು?

25. ಸಾಮಾನ್ಯವಾಗಿ, ತಿಂಗಳ ಕೊನೆಯಲ್ಲಿ ಬಾಡಿಗೆಯನ್ನು ನೀಡಲಾಗುತ್ತದೆ. ಆದರೆ, ಆರೋಪಿತನು ಜೂನ್ ತಿಂಗಳಲ್ಲಿ ರಿಚರ್ಡ್ ಫರ್ನಾಂಡೀಸ್ ನ ಮನೆಗೆ ಬಾಡಿಗೆದಾರನಾಗಿ ಹೋಗಿದ್ದು, ನಿ.ಡಿ. 1 ರಂತೆ ಹಾಗೂ ಆರೋಪಿತನ ಮುಖ್ಯ ವಿಚಾರಣಾ ಹೇಳಿಕೆಯಂತೆ, ಬಾಡಿಗೆಗೆ ಹೋಗುವ ಮೊದಲೇ ಅಂದರೆ,

ದಿನಾಂಕಃ 03.03.2024 ರಂದು ಆರೋಪಿತನು ತನ್ನ ಖಾತೆಯಿಂದ ರಿಚರ್ಡ್ ಫರ್ನಾಂಡೀಸ್ ನ ಖಾತೆಗೆ 20,000/- ರೂ. ಗಳನ್ನು ವರ್ಗಾವಣೆ ಮಾಡಿರುತ್ತಾನೆ. ಅದೇರೀತಿಯಾಗಿ, ಆರೋಪಿತನು ಜೂನ್ ತಿಂಗಳಿನಲ್ಲಿ ರಿಚರ್ಡ್ ಫರ್ನಾಟಂಡೀಸ್ ನ ಮನೆಗೆ ಬಾಡಿಗೆಗೆ ಹೋಗಿ ಒಟ್ಟು ಮೂರು ತಿಂಗಳವರೆಗೆ ಮಾತ್ರ ಆರೋಪಿತನು ಪಿರ್ಯಾದಿಯ ಅಕ್ಕನ ಮನೆಯಲ್ಲಿ ವಾಸವಾಗಿರುತ್ತಾನೆ.

26. ಸದರಿ ಮೂರು ತಿಂಗಳವರೆಗೆ ಅಂದರೆ, ಜೂನ್, ಜುಲೈ ಮತ್ತು ಆಗಸ್ಟ್ ಮಾಹೆಗಳಲ್ಲಿ ಬಾಡಿಗೆದಾರನಾಗಿ ವಾಸವಾಗಿರುತ್ತಾನೆ. ಆದರೆ, ಸದರಿ ಅವಧಿ ಮುಗಿಯುವ ಮೊದಲೇ ದಿನಾಂಕಃ 20.06.2024 ಮತ್ತು 10.06.2024 ರಂದು 16,000/- ಹಾಗೂ 10,000/- ರೂ.ಗಳಂತೆ ಬಾಡಿಗೆ ಹಣವನ್ನು ರಿಚರ್ಡ್ ಫರ್ನಾಂಡೀಸ್ ನ ಖಾತೆಗೆ ಫೋನ್ ಪೇ ಮೂಲಕ ತನ್ನ ಹಾಗೂ ತನ್ನ ಸಹೋದರಿಯ ಖಾತೆಯ ಮೂಲಕ ವರ್ಗಾವಣೆ ಮಾಡುವ ಯಾವುದೇ ಅಗತ್ಯ ಇರಲಿಲ್ಲ. ಅದೂಅಲ್ಲದೇ, ಆರೋಪಿತನು ಕೇವಲ ಮೂರು ತಿಂಗಳವರೆಗೆ ಮಾತ್ರ ರಿಚರ್ಡ್ ಫರ್ನಾಂಡೀಸ್ ನ ಮನೆಯಲ್ಲಿ ವಾಸವಾಗಿದ್ದರೆ, ಮಾಸಿಕ 5,000/- ರೂ. ಗಳಂತೆ ಬಾಡಿಗೆಯನ್ನು ಲೆಕ್ಕ ಮಾಡಿದಾಗ, ಮೂರು ತಿಂಗಳ ಅವಧಿಗೆ ಒಟ್ಟು 15,000/- ರೂ.ಗಳ ಬಾಡಿಗೆ ಆಗುತ್ತದೆ. ಆದರೆ, 46,000/- ರೂ. ಗಳನ್ನು ಆರೋಪಿತನು ಪಿರ್ಯಾದಿಯ ಅಕ್ಕನ ಮಗ ರಿಚರ್ಡ್ ಫರ್ನಾಂಡೀಸ್ ನ ಖಾತೆಗೆ ವರ್ಗಾವಣೆ ಮಾಡಿರುವುದಾಗಿ, ನಿ.ಡಿ. 1 ರ ದಾಖಲೆ ಹಾಗೂ ಆರೋಪಿತನ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ. ಅಷ್ಟು ಹಣವನ್ನು ನೀಡಿದ ನಂತರವೂ ಸಹ, ಸದರಿ ಆರೋಪಿತನು ತಾನು ಬಾಕಿ ಉಳಿಸಿಕೊಂಡಿದ್ದ, 9,000/- ರೂ. ಗಳ ಬಾಡಿಗೆ ಹಣವನ್ನು ಒಂದು ತಿಂಗಳ ನಂತರ ಆರೋಪಿತನು ರಿಚರ್ಡ್ ಫರ್ನಾಂಡೀಸ್ ನಿಗೆ ಕೊಡುವ ಯಾವುದೇ ಅಗತ್ಯ

ಇರುವುದಿಲ್ಲ. ಏಕೆಂದರೆ, ತಾನು ಬಾಡಿಗೆದಾರನಾಗಿ ವಾಸವಾಗಿದ್ದ ಮೂರು ತಿಂಗಳ ಬಾಡಿಗೆಗಿಂತ ಶೇಕಡ 4 ಪಟ್ಟು ಹೆಚ್ಚು ಹಣವನ್ನು ಜೂನ್ ತಿಂಗಳಿನಲ್ಲಿಯೇ ಆರೋಪಿತನು ರಿಚರ್ಡ್ ಫರ್ನಾಂಡೀಸ್ ನಿಗೆ ವರ್ಗಾವಣೆ ಮಾಡಿರುತ್ತಾನೆ. ಆದ್ದರಿಂದ, ಸದರಿ ಆರೋಪಿತನ ಪ್ರತಿರಕ್ಷೆಯು ಸುಳ್ಳು ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ.

27. ಆರೋಪಿತನು ತನ್ನ ವಿರುದ್ಧ ಈಗಾಗಲೇ ಐದು ಚೆಕ್ ಬೌನ್ಸ್ ಕೇಸುಗಳು ನಡೆಯುತ್ತಿದ್ದು, ಸಿ.ಸಿ. 542/2025 ರಲ್ಲಿ ತನಗೆ ಶಿಕ್ಷೆಯಾಗಿದೆ ಎಂಬುದನ್ನು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ನಿ.ಪಿ.1 ರ ಚೆಕ್ಕನ್ನು ಪಿರ್ಯಾದಿಯು ದುರುಪಯೋಗಪಡಿಸಿಕೊಂಡಿದ್ದಾನೆ ಎನ್ನುವದಾದರೆ, ಸದರಿ ಚೆಕ್ಕು ದುರುಪಯೋಗವಾಗಿದೆ ಎನ್ನುವ ಕುರಿತು ಸ್ಟಾಪ್ ಪೇಮೆಂಟ್ ಗಾಗಿ ಅಥವಾ ತನ್ನ ಚೆಕ್ಕು ದುರುಪಯೋಗವಾಗಿರುವ ಕುರಿತು ಆರೋಪಿತನು ಯಾವುದೇ ಕಾನೂನಿನ ಕ್ರಮವನ್ನು ಪಿರ್ಯಾದಿಯ ವಿರುದ್ಧ ತೆಗೆದುಕೊಂಡಿರುವುದಿಲ್ಲ. ಈ ಪ್ರಕರಣವನ್ನು ದಾಖಲು ಮಾಡಿದ ನಂತರವು ಸಹ ಪಿರ್ಯಾದಿಯ ವಿರುದ್ಧ ತನ್ನ ಚೆಕ್ಕನ್ನು ದುರುಪಯೋಗಪಡಿಸಿಕೊಂಡ ಕುರಿತು ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ.

28. ನಿ.ಪಿ.1 ರ ಚೆಕ್ಕಿನಲ್ಲಿರುವ ಸಹಿ ತನ್ನದ್ದಲ್ಲ ಎಂದು ಪಿರ್ಯಾದಿ ಪರ ಪಾಟೀ ಸವಾಲಿನಲ್ಲಿ ಆರೋಪಿತನು ಹೇಳಿದ್ದಾನೆ. ಆದರೆ, ತನ್ನ ಮುಖ್ಯ ವಿಚಾರಣಾ ಸಾಕ್ಷಿಯಲ್ಲಿ ನಿ.ಪಿ.1 ರ ಚೆಕ್ಕಿನಲ್ಲಿರುವ ಸಹಿಯು ತನ್ನದ್ದಲ್ಲ ಎಂಬ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಅದೇರೀತಿಯಾಗಿ, ಪಿ.ಡಬ್ಲ್ಯೂ-1 ರವರ ಪಾಟೀ ಸವಾಲಿನಲ್ಲಿಯೂ ಸಹ ಸದರಿ ಚೆಕ್ಕಿನಲ್ಲಿನ ಸಹಿಯೂ ತನ್ನದ್ದಲ್ಲ ಎನ್ನುವ ಬಗ್ಗೆ ಪಿರ್ಯಾದಿಯಿಂದ ಯಾವುದೇ ಪೂರಕ ಉತ್ತರವನ್ನು ಪಡೆದುಕೊಳ್ಳಲು ಆರೋಪಿತನು ಯಶಸ್ವಿಯಾಗಿರುವುದಿಲ್ಲ.

29. ನಿ.ಪಿ.1 ರ ಚೆಕ್ಕು ನಿ.ಪಿ.2 ರಂತೆ Refer to drawer ಎಂಬ ಕಾರಣಕ್ಕಾಗಿ ಅನಾಧರಣಗೊಂಡಿದೆಯೇ ಹೊರತು ಆರೋಪಿತನ ಸಹಿ ತಾಳೆಯಾಗುವುದಿಲ್ಲ ಎಂಬ ಕಾರಣಕ್ಕಾಗಿ ಅನಾಧರಣಗೊಂಡಿರುವುದಿಲ್ಲ. ಸದರಿ ರಿಚರ್ಡ್ ಫರ್ನಾಂಡೀಸ್ ನಿಗೆ ಆರೋಪಿತನು ನಿ.ಪಿ.1 ರ ಚೆಕ್ಕನ್ನು ನೀಡಿದ್ದರೆ ತಾನು ಬಾಡಿಗೆ ಹಣವನ್ನು ಮರುಪಾವತಿ ಮಾಡಿದ ನಂತರ, ಸದರಿ ದಾಖಲೆಗಳನ್ನು ಪಡೆದುಕೊಳ್ಳಲು ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಕೇವಲ ಮೌಖಿಕ ಹೇಳಿಕೆಯಲ್ಲಿ ದೂರನ್ನು ನೀಡಲು ಹೋದಾಗ ಪೊಲೀಸರು ರಾಜಿ ಮಾಡಿಸಿದರು ಎಂಬುದಾಗಿ ಹೇಳಿಕೆಯನ್ನು ನೀಡಿರುತ್ತಾರೆ. ಸದರಿ ಹೇಳಿಕೆಗೆ ಪೂರಕ ದಾಖಲೆಗಳು ಇಲ್ಲದ ಕಾರಣ, ಆರೋಪಿತನ ಪ್ರತಿರಕ್ಷೆಯನ್ನು ಒಪ್ಪಿಕೊಳ್ಳಲು ಆಗುವುದಿಲ್ಲ.

30. ಅದೇರೀತಿಯಾಗಿ, ತನ್ನ ಪ್ರತಿರಕ್ಷೆಯಲ್ಲಿ ನೀಡಿದ ಹೇಳಿಕೆಗಳಂತೆ, ತನ್ನ ಸಹೋದರಿ ಶೋಭಾರವರನ್ನು ಹಾಗೂ ರಿಚರ್ಡ್ ಫರ್ನಾಂಡೀಸ್ ನನ್ನು ನ್ಯಾಯಾಲಯದ ಮುಂದೆ ಕರೆಯಿಸಿ, ವಿಚಾರಣೆಗೆ ಒಳಪಡಿಸುವ ಪ್ರಯತ್ನವನ್ನು ಆರೋಪಿತನು ಮಾಡಿರುವುದಿಲ್ಲ. ಅಲ್ಲದೇ, ತನ್ನ ಮತ್ತು ರಿಚರ್ಡ್ ಫರ್ನಾಂಡೀಸ್ ನಡುವೆ ಆದ ಬಾಡಿಗೆ ಕರಾರನ್ನು ಆರೋಪಿತನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಆದಕಾರಣ, ಸದರಿ ಆರೋಪಿತನ ಪ್ರತಿರಕ್ಷೆಯನ್ನು ಒಪ್ಪಿಕೊಳ್ಳಲು ಆಗುವುದಿಲ್ಲ. ಆರೋಪಿತನು ತನ್ನ ಕಾನೂನುಬದ್ಧ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಮೇಲ್ಕಂಡಂತೆ ಪ್ರತಿರಕ್ಷೆಗಳನ್ನು ತೆಗೆದುಕೊಂಡಿದ್ದಾನೆ ಎಂಬುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ.

31. ಪಿ.ಡಬ್ಲ್ಯೂ-1 ರವರು ನಿ.ಪಿ.1 ರಿಂದ 5 ರ ದಾಖಲೆಗಳಿಗೆ ಪೂರಕವಾಗಿ ತನ್ನ ದೂರನ್ನು ಅನುಸರಿಸಿ ಸಾಕ್ಷಿಯನ್ನು ನುಡಿದಿರುತ್ತಾರೆ. ಪಿರ್ಯಾದಿ ಪರ ಹಾಜರುಪಡಿಸಿರುವ ತೀರ್ಪುಗಳಂತೆ ಪ್ರತಿಯೊಂದು ಲಿಖಿತ ಪತ್ರವನ್ನು

ಹೊಂದಿರುವ ಧಾರಕನ ಪರವಾಗಿ ತದಿರುದ್ಧವಾಗಿ ಸಾಬೀತಾಗದ ಹೊರತು, ಪೂರ್ವ ಭಾವನೆ ಮಾಡಬಹುದಾಗಿರುತ್ತದೆ. ಈ ಪ್ರಕರಣದಲ್ಲಿಯೂ ಸಹ ಪಿರ್ಯಾದಿ ಪರ ಕಾನೂನಿನ ಪೂರ್ವಭಾವನೆ ಇರುವುದರಿಂದ, ಸದರಿ ಪೂರ್ವಭಾವನೆಯನ್ನು ಆರೋಪಿತನು ಸೂಕ್ತ ಸಾಕ್ಷ್ಯಧಾರಗಳಿಂದ ಖಂಡಿಸಲು ವಿಫಲನಾಗಿರುತ್ತಾನೆ. ಆದಕಾರಣ, ಪಿರ್ಯಾದಿಯ ಪರವಾಗಿ ನ್ಯಾಯಾಲಯವು ಲಿಖಿತ ಪತ್ರಗಳ ವರ್ಗಾವಣೆ ಕಾಯಿದೆ ಕಲಂ 118 ಮತ್ತು 139 ರ ಅಡಿಯಲ್ಲಿರುವಂತೆ ಕಾನೂನಿನ ಪೂರ್ವಭಾವನೆಗೆ ಬಂದಿರುತ್ತದೆ. ಸದರಿ ಕಾಯಿದೆಯ ಕಲಂ 118(ಎ) ನಂತೆ, ಪ್ರತಿಯೊಂದು ಲಿಖಿತ ಪತ್ರಗಳ ವರ್ಗಾವಣೆ ದಾಖಲೆಯು, ಪ್ರತಿಫಲದ ಸ್ವೀಕೃತಿಯ ಸಲುವಾಗಿ ನೀಡಲಾಗಿರುತ್ತದೆ ಎನ್ನುವುದು ಕಾನೂನಿನ ಪೂರ್ವಭಾವನೆಯಾಗಿರುತ್ತದೆ.

32. ಪಿರ್ಯಾದಿಯ ಪರವಾಗಿ ಲಿಖಿತ ಪತ್ರಗಳ ವರ್ಗಾವಣೆಯ ಕಾಯಿದೆ ಕಲಂ 118(ಎ) ಹಾಗೂ 139 ರ ಅಡಿಯಲ್ಲಿ ಇರುವಂತಹ ಪೂರ್ವಭಾವನೆಯನ್ನು ಆರೋಪಿತನು ಸಾಕ್ಷ್ಯಧಾರಗಳ ಮೂಲಕ ಖಂಡಿಸಲು ಸಂಪೂರ್ಣವಾಗಿ ವಿಫಲನಾಗಿರುತ್ತಾನೆ. ಆದ್ದರಿಂದ, ಆರೋಪಿತನು ನಿ.ಪಿ.1 ರ ಚೆಕ್ಕಿನ ಹಣವನ್ನು ಕಾನೂನುಬದ್ಧವಾಗಿ ಪಿರ್ಯಾದಿಗೆ ಮರುಪಾವತಿ ಮಾಡುವ ಬಾಧ್ಯತೆಯನ್ನು ಹೊಂದಿದ್ದಾನೆ ಎಂಬುದಾಗಿ ಈ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ. ಆದಕಾರಣ, ನಿ.ಪಿ.1 ರಲ್ಲಿ ಒಳಗೊಂಡಿರುವ 1,50,000/- ರೂ. ಹಣದೊಂದಿಗೆ ಆರೋಪಿತನು ಪಿರ್ಯಾದಿಗೆ ಪರಿಹಾರವನ್ನು ಸಹ ಪಾವತಿಸಲು ಬದ್ಧನಾಗಿದ್ದಾನೆಂಬುದಾಗಿ, ಈ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ. ಭಾರತೀಯ ನಾಗರೀಕ ಸುರಕ್ಷಾ ಸಂಹಿತೆಯ ಕಲಂ 395 ರ ಅಡಿಯಲ್ಲಿ ಪಿರ್ಯಾದಿಯು ಪರಿಹಾರವನ್ನು ಸಹ ಪಡೆದುಕೊಳ್ಳಲು ಅರ್ಹನಾಗಿದ್ದಾನೆ ಮತ್ತು ಚೆಕ್ಕಿನ ಮೊತ್ತದೊಂದಿಗೆ ಹೆಚ್ಚುವರಿಯಾಗಿ 50,000/- ರೂಪಾಯಿಗಳನ್ನು

ಜುಲ್ಮಾನೆಯಾಗಿ ಆರೋಪಿತನು ಭರಿಸಲು ಬದ್ಧನಾಗಿದ್ದಾನೆ ಎಂಬುದಾಗಿ ಅಭಿಪ್ರಾಯಕ್ಕೆ ಬರುತ್ತಾ, ಮೇಲಿನ ಅಂಶ 1 ರಿಂದ 4 ಅನ್ನು **ಸಕಾರಾತ್ಮಕವಾಗಿ** ಉತ್ತರಿಸುತ್ತೇನೆ.

33. **ಅಂಶ–5**:– ಮೇಲೆ ಚರ್ಚಿಸಿದ ಕಾರಣಗಳಿಗಾಗಿ ಈ ಕೆಳಕಂಡಂತೆಃ

ಆದೇಶ

ಭಾರತೀಯ ನಾಗರೀಕ ಸುರಕ್ಷ ಸಂಹಿತೆಯ ಕಲಂ 278(2) ರಡಿಯಲ್ಲಿ ನೀಡಿರುವ ಅಧಿಕಾರವನ್ನು ಚಲಾಯಿಸಿ, ಆರೋಪಿಯು ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದಾನೆ ಎಂದು ಈ ನ್ಯಾಯಾಲಯವು ನಿರ್ಣಯಿಸಿರುತ್ತದೆ.

ಆರೋಪಿಯು ಚೆಕ್ಕಿನ ಹಣದೊಂದಿಗೆ 50,000/– ರೂ.ಗಳನ್ನು ಹೆಚ್ಚುವರಿಯಾಗಿ ಅಂದರೆ, ಒಟ್ಟು ರೂ. 2,00,000/– ಗಳನ್ನು ಜುಲ್ಮಾನೆ ಹಣವಾಗಿ ಪಾವತಿಸಲು ಆದೇಶವನ್ನು ನೀಡಿರುತ್ತದೆ. ಒಂದು ವೇಳೆ ಆರೋಪಿಯು ಸದರಿ ಜುಲ್ಮಾನೆ ಹಣವನ್ನು ಪಾವತಿಸಲು ವಿಫಲವಾದರೆ 01 ವರ್ಷದವರೆಗೆ ಸಾದಾ ಕಾರಾಗೃಹವಾಸದ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ ಎಂದು ಆದೇಶಿಸಿದೆ.

ಮುಂದುವರೆದು ಪಿರ್ಯಾದಿಯು ಜುಲ್ಮಾನೆ ಹಣದಲ್ಲಿ ರೂ. 1,90,000/– ಗಳನ್ನು ಭಾರತೀಯ ನಾಗರೀಕ ಸುರಕ್ಷ ಸಂಹಿತೆಯ ಕಲಂ. 395 ರ ಅಡಿಯಲ್ಲಿ ಪರಿಹಾರವಾಗಿ ಪಡೆಯಲು ಅರ್ಹವಾಗಿದೆ ಎಂದು ಆದೇಶಿಸುತ್ತದೆ ಮತ್ತು ಉಳಿದ ರೂ.10,000/– ಗಳ ಜುಲ್ಮಾನೆ ಹಣವನ್ನು ರಾಜ್ಯ ಸರ್ಕಾರಕ್ಕೆ ಪಾವತಿಸಲು ಆದೇಶಿಸಲಾಗಿದೆ.

ಆರೋಪಿತನು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ, ರದ್ದುಗೊಳಿಸಲಾಗಿದೆ.

ಆರೋಪಿತನಿಗೆ ತೀರ್ಪಿನ ದೃಢೀಕೃತ ಪ್ರತಿಯನ್ನು ಉಚಿತವಾಗಿ ನೀಡುವಂತೆ ಕಚೇರಿಗೆ ನಿರ್ದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಂದ ನೇರವಾಗಿ ಕಂಪ್ಯೂಟರಿನಲ್ಲಿ ಬೆರಳಚ್ಚು ಮಾಡಿಸಿ, ನಂತರ ಅದನ್ನು ಓದಿ, ತಪ್ಪುಗಳನ್ನು ತಿದ್ದುಪಡಿಮಾಡಿ, ಈ ದಿನ ಅಂದರೆ, ದಿನಾಂಕಃ 13 ನೇ ಜುಲೈ 2026 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ.)

(ಮಾದೇಶ ಎಂ.ವಿ.,)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ಸಾಗರ.

ಅನುಬಂಧ

1. ಪಿರ್ಯಾದುದಾರರ ಪರವಾಗಿ ವಿಚಾರಣೆಯಾದ ಸಾಕ್ಷಿಗಳ ಪಟ್ಟಿಃ

ಪಿ.ಡಬ್ಲೂ– 1	ಜೋಸೆಫ್ ಲೋಬೋ ಬಿನ್ ಜಾನ್ ಲೋಬೋ.

2. ಪಿರ್ಯಾದುದಾರರ ಪರ ಗುರ್ತಿಸಲಾದ ದಾಖಲೆಗಳ ಪಟ್ಟಿಃ

ನಿ.ಪಿ– 1	ಅಸಲು ಚೆಕ್ಕು
ನಿ.ಪಿ– 2	ಹಿಂಬರಹ.

ನಿ.ಪಿ–3	ಕಾನೂನಬದ್ಧ ನೋಟೀಸು.
ನಿ.ಪಿ–4	ಅಂಚೆ ರಶೀದಿ.
ನಿ.ಪಿ–5	ಅಂಚೆ ಸ್ವೀಕೃತಿ.

3. ಆರೋಪಿಯ ಪರ ವಿಚಾರಣೆಯಾದ ಸಾಕ್ಷಿಗಳ ಪಟ್ಟಿ:

ಡಿ.ಡಬ್ಲೂ.1	ಜಯಂತ ಎಂ. ಬಿನ್ ಮಂಜಪ್ಪ.

4. ಆರೋಪಿಯ ಪರ ಗುರ್ತಿಸಲಾದ ದಾಖಲೆಗಳ ಪಟ್ಟಿ:

ನಿ.ಡಿ–1	ಸ್ಟೇಟ್ ಮೆಂಟ್ ಆಫ್ ಅಕೌಂಟ್ಸ್

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ಸಾಗರ.